## ನಿಸ್ಸೋಡನೆ

# ವೈದ್ಯಕೀಯ ಶಿಕ್ಷಣಕ್ಕೆ ಅನಾರೋಗ್ಯ ಇದು ಔಷಧಿ ಹುಡುಕಲೇಬೇಕಾದ ಸಮಯ

**ವೈದ್ಯಕೀಯ ಶಿಕ್ಷಣ ನಮ್ಮಲ್ಲಿ ದುಬಾರಿಯಾಗಿದೆ. ಎಂಬಿಬಿಎಸ್ ಪದವಿ ಲಕ್ಷಗಳಲ್ಲಿ ತೂಗಿದರೆ, ಸ್ನಾತಕೋತ್ತರ ಪದವಿ ಕೋಟಿಗಳ ಲೆಕ್ಕದಲ್ಲಿ ಬಿಕರಿಯಾಗುತ್ತಿದೆ. ಅಷ್ಟೊಂದು ದುಡ್ಡು ಸುರಿದು ವೈದ್ಯಕೀಯ ಪದವಿ ಪಡೆದವರು ಅದನ್ನು ಸೇವೆಯಾಗಿಸಿಕೊಳ್ಳಲು ಸಾಧ್ಯವೇ?**

ಶಿಕ್ಷಣ ಮತ್ತು ಆರೋಗ್ಯ ಯಾವುದೇ ಸಮಾಜಕ್ಕೆ ಜೀವ ಮತ್ತು ಆತ್ಮ ಇದ್ದಂತೆ. ಆದರೆ ಈ ಎರಡೂ ಕ್ಷೇತ್ರಗಳಿಗೆ ನಮ್ಮಲ್ಲಿ ಸಿಗಬೇಕಾದ ರೀತಿಯಲ್ಲಿ ಪೋಷಣೆ ಸಿಗದೆ, ಕಡೆಗಣನೆಗೆ ಒಳಗಾಗಿವೆ. ಅಂತೆಯೇ ವಿಪರೀತ ಅನಿಸುವಷ್ಟು ದುಬಾರಿಯೂ ಆಗಿವೆ. ಕುಟುಂಬಗಳ ಜಂಘಾಬಲವನ್ನೇ ಉಡುಗಿಸುವ ಮಟ್ಟಿಗೆ ದುಬಾರಿಯಾಗಿವೆ!

ವೈದ್ಯಕೀಯ ಶಿಕ್ಷಣವು ಅತಿ ಮುಖ್ಯವಾದ ಈ ಎರಡೂ ಅಂಶಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ. ವೈದ್ಯ ವೃತ್ತಿಯನ್ನು ಸೇವೆಯೆಂದೇ ನಮ್ಮಲ್ಲಿ ಹೆಚ್ಚಿನ ಜನ ಪರಿಗಣಿಸಿದ್ದಾರೆ. ವೈದ್ಯರನ್ನು ದೇವರಿಗೆ ಸಮಾನ ಎಂದು ಪರಿಭಾವಿಸುವ ಮನಃಸ್ಥಿತಿ ನಮ್ಮಲ್ಲಿ ಮನೆಮಾಡಿದೆ. ಆ ನಂಬಿಕೆಗೆ ಕುಂದು ಬಂದಿದ್ದರೂ ಅದು ಪೂರ್ತಿ ಅಳಿಸಿಹೋಗಿಲ್ಲ. ಆದರೆ ಸೇವೆಯ ಪರಿಕಲ್ಪನೆಯನ್ನು ಅಣಕಿಸುವ ರೀತಿಯಲ್ಲಿ ವೈದ್ಯಕೀಯ ಶಿಕ್ಷಣ ದುಬಾರಿಯಾಗಿದೆ. ಎಂಬಿಬಿಎಸ್ ಪದವಿ ಲಕ್ಷಗಳಲ್ಲಿ ತೂಗಿದರೆ, ಸ್ನಾತಕೋತ್ತರ ಪದವಿ ಕೋಟಿಗಳ ಲೆಕ್ಕದಲ್ಲಿ ಬಿಕರಿಯಾಗುತ್ತಿದೆ. ಅಷ್ಟೊಂದು ದುಡ್ಡು ಸುರಿದು ವೈದ್ಯಕೀಯ ಪದವಿ ಪಡೆದವರು ಅದನ್ನು ಸೇವೆಯಾಗಿಸಿಕೊಳ್ಳಲು ಸಾಧ್ಯವೇ? ಈ ವೃತ್ತಿ ಈಗೇನಾದರೂ ದಂಧೆಯ ಸ್ವರೂಪ ಪಡೆದಿದ್ದರೆ ಅದರ ಮೂಲ ಇಲ್ಲೇ ಅಡಗಿದೆ.

ಐದು ಸಾವಿರ ಕಿಲೊಮೀಟರ್ ದೂರದಲ್ಲಿ ನಡೆದಿರುವ ಕದನವೊಂದು ಇಲ್ಲಿನ ವೈದ್ಯಕೀಯ ಶಿಕ್ಷಣದ ಅರೆಕೊರೆಗಳನ್ನು ಈಗ ಒರೆಗೆ ಹಚ್ಚಲು ಕಾರಣವಾಗಿದೆ! ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು. ಅವರಲ್ಲಿ ಬಹುತೇಕರು ವೈದ್ಯಕೀಯ ವಿದ್ಯಾರ್ಥಿಗಳು. ಕರ್ನಾಟಕದಿಂದಲೂ ಅನೇಕ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ ಶಿಕ್ಷಣ ಪಡೆಯುತ್ತಿದ್ದಾರೆ. ಹಾರ್ಕಿವ್‌ನಲ್ಲಿ ವೈದ್ಯಕೀಯ ಶಿಕ್ಷಣ ಅಭ್ಯಾಸ ಮಾಡುತ್ತಿದ್ದ ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದ ನವೀನ್ ಗ್ಯಾನಗೌಡರ್ ರಷ್ಯಾದ ಶೆಲ್ ದಾಳಿಗೆ ಸಿಲುಕಿ ಸಾವಪ್ಪಿದ್ದಾರೆ. ಮನಕಲಕುವ ಈ ದಾರುಣ ಘಟನೆಯ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣದ ವಿವಿಧ ಮಗ್ಗುಲುಗಳು ಈಗ ವ್ಯಾಪಕ ಚರ್ಚೆಗೆ ಒಳಗಾಗಿವೆ. ವೈದ್ಯಕೀಯ ಶಿಕ್ಷಣ ದುಬಾರಿಯಾಗಿ ಪರಿಣಮಿಸಿರುವುದು, ಪ್ರವೇಶ ಪ್ರಕ್ರಿಯೆಗೆ ಸಿಇಟಿ ಸ್ಥಾನವನ್ನು 'ನೀಟ್' ಆಕ್ರಮಿಸಿಕೊಂಡಿರುವುದು, ಸೀಟು ಪಡೆಯಲು ಉಂಟಾಗಿರುವ ವಿಪರೀತ ಸ್ಪರ್ಧೆ, ಟ್ಯೂಷನ್ ಹಾವಳಿ... ಈ ಎಲ್ಲದರ ಬಗ್ಗೆಯೂ ಅಭಿಪ್ರಾಯಗಳು ವ್ಯಕ್ತವಾಗತೊಡಗಿವೆ.

ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ 19 ಸರ್ಕಾರಿ, 30 ಖಾಸಗಿ ಕಾಲೇಜುಗಳು ಮತ್ತು 12 ಡೀಮ್ಡ್ ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ ಸುಮಾರು 2,900 ಸರ್ಕಾರಿ ಸೀಟು ಸೇರಿ 9000ಕ್ಕೂ ಹೆಚ್ಚು ಸೀಟುಗಳು ಲಭ್ಯ. ಆದರೆ ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ಆಕಾಂಕ್ಷಿಗಳು ನೀಟ್‌ಗೆ ನೋಂದಾಯಿಸಿಕೊಳ್ಳುತ್ತಿದ್ದಾರೆ. ಖಾಸಗಿ ಕಾಲೇಜುಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ಪ್ರವೇಶ ಪಡೆದು ಎಂಬಿಬಿಎಸ್ ಪೂರೈಸಲು ₹ 50 ಲಕ್ಷದಿಂದ 60 ಲಕ್ಷ ತೆರಬೇಕಾಗುತ್ತದೆ. ಕೆಲವು ಕಾಲೇಜುಗಳಲ್ಲಿ ಇನ್ನೂ ಹೆಚ್ಚು ಎಂಬ ಮಾತಿದೆ. ರಷ್ಯಾ, ಉಕ್ರೇನ್ ಒಳಗೊಂಡಂತೆ ಕೆಲವು ದೇಶಗಳಲ್ಲಿ ಇದಕ್ಕಿಂತ ಹಲವು ಪಟ್ಟು ಕಡಿಮೆ ವೆಚ್ಚದಲ್ಲಿ ಕೋರ್ಸ್ ಪೂರೈಸಬಹುದು ಎಂಬ ಕಾರಣಕ್ಕೆ ನಮ್ಮ ವಿದ್ಯಾರ್ಥಿಗಳು ಅಲ್ಲಿಗೆ ತೆರಳುತ್ತಿದ್ದಾರೆ.

ನಮ್ಮ ಜನಬಾಹುಳ್ಯಕ್ಕೆ ತಕ್ಕಂತೆ ವೈದ್ಯರ ಲಭ್ಯತೆ ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಕೊರತೆ ವಿಪರೀತಕ್ಕೆ ಹೋಗಿದೆ. ಏನೇ ಸವಲತ್ತು ಕೊಡಮಾಡಿದರೂ ಹಳ್ಳಿಗಳ ಕಡೆ ಮುಖ ಮಾಡಲು ವೈದ್ಯರು ಸಿದ್ಧರಿಲ್ಲ. ನಮ್ಮನ್ನು ಆಳಿದವರ ದೂರದೃಷ್ಟಿಯ ಕೊರತೆ ಈ ವಿಚಾರದಲ್ಲಿ ಕಾಣ್ಣಿಗೆ ರಾಚುವಂತಿದೆ. ವೈದ್ಯಕೀಯ ಶಿಕ್ಷಣವನ್ನು ಈ ಮಟ್ಟಿಗೆ ದುಬಾರಿಯಾಗಲು ಬಿಟ್ಟಿರುವುದು ಕೂಡ ಅದರ ಒಂದು ಭಾಗವೇ ಆಗಿದೆ.

ಕೆಲವು ಎಂಜಿನಿಯರಿಂಗ್ ಕಾಲೇಜುಗಳು ವಿದ್ಯಾರ್ಥಿಗಳ ಬರ ಎದುರಿಸುತ್ತಿವೆ. ಕೋರ್ಸ್‌ಗಳಿಗೆ ಸೇರಲು ವಿದ್ಯಾರ್ಥಿಗಳು ಸಿಗುತ್ತಿಲ್ಲ. ಆದರೆ ವೈದ್ಯಕೀಯ ಶಿಕ್ಷಣಕ್ಕೆ ಆಕಾಂಕ್ಷಿಗಳು ಇದ್ದಾರೆ. ಸೀಟು ಲಭ್ಯತೆ ಇಲ್ಲ. ಎಂತಹ ವಿರೋಧಾಭಾಸ! ಎಂಬಿಬಿಎಸ್ ಪೂರೈಸಿದ ಅನೇಕರು ವಿದೇಶಗಳಿಗೆ ತೆರಳುತ್ತಾರೆ. ಸರ್ಕಾರಿ ಸೀಟು ಪಡೆದು ಶಿಕ್ಷಣ ಪೂರೈಸಿದ ಬುದ್ಧಿವಂತರೇ ಅವರಲ್ಲಿ ಹೆಚ್ಚು ಎಂಬ ಅಭಿಪ್ರಾಯ ಇದೆ. 'ವೈದ್ಯಕೀಯ ಶಿಕ್ಷಣಕ್ಕಾಗಿ ದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿದೇಶಗಳಿಗೆ ತೆರಳಲು ಈ ಹಿಂದೆ ಆಡಳಿತ ನಡೆಸಿದ ಸರ್ಕಾರಗಳೇ ಕಾರಣ' ಎಂದು ಪ್ರಧಾನಿ ನರೇಂದ್ರ ಮೋದಿ ದೂರಿದ್ದಾರೆ. ಅವರ ವಿರುದ್ಧ ಇವರು, ಇವರ ವಿರುದ್ಧ ಅವರು ಬೊಟ್ಟು ಮಾಡುವುದರಿಂದ ಸಮಸ್ಯೆ ನಿವಾರಣೆಯಾಗುವುದಿಲ್ಲ.

ನಮ್ಮ ಆರೋಗ್ಯ ಕ್ಷೇತ್ರದ ಹುಳುಕುಗಳು ಕೊರೊನಾ ಕಾಲಘಟ್ಟದಲ್ಲಿ ಬಟಾಬಯಲಾಗಿವೆ. ಮೂಲ ಸೌಕರ್ಯ ಮತ್ತು ವೈದ್ಯರ ಕೊರತೆಯೂ ಅದಕ್ಕೊಂದು ಕಾರಣ. ಈ ಕ್ಷೇತ್ರದ ಬಲವರ್ಧನೆ ಈಗಿನ ತುರ್ತು. ಕೊರತೆಗಳ ಬಗೆಗೆ ಸಮಗ್ರವಾಗಿ ಅಧ್ಯಯನ ಮಾಡಿ, ಕಾಲಮಿತಿಯೊಳಗೆ ಅದನ್ನು ನಿವಾರಿಸುವ ಇಚ್ಛಾಶಕ್ತಿ ತೋರಿದರೆ ಮಾತ್ರ ಅದು ಸಾಧ್ಯ.

■ **ಎನ್. ಉದಯಕುಮಾರ್**



ಈಶ್ವರ್